**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**. 377/2022

**PW**. 01

**CW**. 01

**ಸಾಕ್ಷಿಯ ಹೆಸರು – ಜಯಮ್ಮ**

**ಗಂಡನ ಹೆಸರು – ನಾಗೇಗೌಡ**

**ವಯಸ್ಸು – 55 ವರ್ಷಗಳು** ದಿನಾಂಕ **16.04.2025** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಗೃಹಿಣಿ**

**ವಾಸಸ್ಥಳ – ಹರೇನಹಳ್ಳಿ, ಪಿರಿಯಾಪಟ್ಟಣ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ನಾಗೇಗೌಡ ನನ್ನ ಗಂಡ. ನನಗೆ ಶೋಭಾ ಮತ್ತು ರಜನಿ ಎಂಬ ಇಬ್ಬರು ಹೆಣ್ಣುಮಕ್ಕಳು. ಆರೋಪಿ ಗೊತ್ತು. ಈಗ್ಗೆ 4 ವರ್ಷಗಳ ಹಿಂದೆ ಆರೋಪಿಯ ಹೆಂಡತಿ ಜಗಳ ಮಾಡಿಕೊಂಡು ತವರು ಮನೆಗೆ ಹೋಗಿದ್ದಳು. ಆಗ ಆರೋಪಿಯು ನಮ್ಮ ಮನೆಯಲ್ಲಿ ಊಟ ತಿಂಡಿ ಮಾಡುತ್ತಿದ್ದ. ನನ್ನ ಮಗಳು ಚಾಸಾ 7 ನಮ್ಮ ಮನೆಯಲ್ಲಿದ್ದಳು. ಆರೋಪಿಯು ಊಟ, ತಿಂಡಿಗೆ ಮನೆಯಲ್ಲಿ ಬರುತ್ತಿದ್ದ ಕಾರಣ ಊರಿನಲ್ಲಿ ಕೆಟ್ಟದಾಗಿ ಮಾತನಾಡಿಕೊಳ್ಳುತ್ತಿದ್ದರು. ಆದ್ದರಿಂದ ಆರೋಪಿಗೆ ಮನೆಗೆ ಬರಬೇಡ ಎಂದು ನನ್ನ ಗಂಡ ಹೇಳಿದರು. ಆ ನಂತರ ನನ್ನ ಗಂಡ ಸಂಗರಶೆಟ್ಟಿಹಳ್ಳಿಗೆ ಹೋಗಿದ್ದಾಗ ಸಂಜೆ 6.45 ಗಂಟೆ ಸಮಾರಿಗೆ ಗಾಯಗೊಂಡು ಹೊಟ್ಟೆನೋವಿನಿಂದ ನರಳುತ್ತಿರುವುದಾಗಿ ನನ್ನ ಮೊಮ್ಮಗಳು ಕರೆ ಮಾಡಿ ತಿಳಿಸಿದ್ದರಿಂದ, ನಾನು ನನ್ನ ಮಗಳು ಚಾಸಾ 7 ರವರು ಸೇರಿ ಸ್ಥಳಕ್ಕೆ ಹೋಗಿ ನನ್ನ ಗಂಡನನ್ನು ಪಿರಿಯಾಪಟ್ಟಣ ಆಸ್ಪತ್ರೆಗೆ ಸೇರಿಸಿರುತ್ತೇನೆ. ನನ್ನ ಗಂಡನ ತಲೆಗೆ ಪೆಟ್ಟಾಗಿರುತ್ತದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಿರುತ್ತೇವೆ. ನನ್ನ ಗಂಡ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಒಂದು ವಾರದ ನಂತರ ಮರಣ ಹೊಂದಿದರು. ನನ್ನ ಗಂಡನಿಗೆ ಸರಿಯಾಗಿ ಮಾತನಾಡಲು ಆಗದೇ ಇದ್ದ ಕಾರಣ ತನಗೆ ಆದ ಗಾಯಗಳ ಬಗ್ಗೆ ಸರಿಯಾದ ಮಾಹಿತಿ ನೀಡಲಿಲ್ಲ. ಆರೋಪಿಯು ನಮ್ಮ ಸಂಬಂಧಿಯಾದ ಕಾರಣ ಊರಿನಲ್ಲಿ ಪಂಚಾಯ್ತಿ ಮಾಡಿ ಚಿಕಿತ್ಸೆ ವೆಚ್ಚವನ್ನು ಭರಿಸುವುದಾಗಿ ಹೇಳಿದನು. ಆದ್ದರಿಂದ ನಾನು ಕೂಡಲೇ ದೂರನ್ನು ನೀಡಲಿಲ್ಲ. ಒಂದು ವಾರದ ನಂತರ ದೂರು

ನೀಡಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ನಾನು ಮೊದಲನೇ ದೂರು ನೀಡಿದ ನಾಲ್ಕು ದಿನಗಳ ನಂತರ ನನ್ನ ಗಂಡ ಮರಣ ಹೊಂದಿದ್ದು, ಆ ಬಗ್ಗೆ ಮತ್ತೊಂದು ದೂರನ್ನು ಪೊಲೀಸರು ಪಡೆದಿದ್ದಾರೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಸದರಿ ಎರಡು ದೂರುಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಂತರ ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**.)

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ಶಶಿ ನಮ್ಮ ಸಂಬಂಧಿಕ. ಚಿತ್ರಾ ಚಾಸಾ 2 ಅವರ ಮಗು. ಸಂಗಶೆಟ್ಟಿಹಳ್ಳಿ ಬಳಿ ನನ್ನ ಗಂಡ ಗಾಯಗೊಂಡು ಬಿದ್ದಿರುವ ವಿಚಾರವನ್ನು ಶಶಿ ಚಿತ್ರಾಳಿಗೆ ತಿಳಿಸಿದ್ದಾನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ನನ್ನ ಗಂಡ ಮಾತನಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡನನ್ನು ವಿಚಾರಿಸಲಾಗಿ ಅದೇ ದಿನ ಸಂಜೆ 6.30 ಗಂಟೆಗೆ ಸಂಗಶೆಟ್ಟಿಹಳ್ಳಿ ಸರ್ಕಾರಿ ಶಾಲೆ ಮುಂಭಾಗ ನಾನು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯು ಸದರಿ ರಸ್ತೆಯಲ್ಲಿ ಒಂದು ಮೋಟರ್ ಸೈಕಲ್ ನಲ್ಲಿ ಬಂದು ಅವಾಚ್ಯ ಶಬ್ಧಗಳಿಂದ ಬೈದು ಊಟ ಹಾಕದಂತೆ ಮಾಡಿದ್ದೀಯಾ ಎಂದು ಬೈದು ಸ್ಥಳದಲ್ಲಿ ಬಿದ್ದಿದ್ದ ಒಂದು ಕಲ್ಲಿನಿಂದ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತಗಾಯ ಮಾಡಿ ನಂತರ ಕಾಲಿನಿಂದ ಹೊಟ್ಟೆಗೆ, ಎದೆಗೆ ಒದ್ದು ನೋವು ಮಾಡಿದ್ದಾನೆ ಎಂದು ನನ್ನ ಗಂಡ ತಿಳಿಸಿದ ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ಶಶಿ, ಚಾಸಾ 3 ಮತ್ತು ಇತರರು ಜಗಳ ಬಿಡಿಸಿದರು ಎಂದು ನನ್ನ ಗಂಡ ತಿಳಿಸಿದ ಎಂದರೆ ಸರಿಯಲ್ಲ. ಆ ಬಗ್ಗೆ ಊರಿನಲ್ಲಿ ಮುಖಂಡರಿಗೆ ದೂರನ್ನು ನೀಡಿ ಅವರು ಪಂಚಾಯ್ತಿ ಮಾಡಿದ್ದು, ಪಂಚಾಯ್ತಿಯಲ್ಲಿ ಆರೋಪಿ ಚಿಕಿತ್ಸೆ ವೆಚ್ಚವನ್ನು ಕೊಡುವುದಾಗಿ ಊರಿನ ಮುಖಂಡರಿಗೆ ಹೇಳಿದ್ದರಿಂದ ನಾನು ದೂರು ನೀಡಿಲ್ಲ ಎಂದರೆ ಸರಿಯಲ್ಲ. ಆ ನಂತರ ಆರೋಪಿ ಚಿಕಿತ್ಸೆ ವೆಚ್ಚವನ್ನು ನೀಡದಿದ್ದಕಾರಣ ತಡವಾಗಿ ನಾನು ಮೊದಲನೇ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**SC No**. 377/2022

**PW**. 01

ದಿಃ 05.07.2022 ರಂದು ನನ್ನ ಗಂಡ ಮೃತ ಪಟ್ಟಿದ್ದರಿಂದ ಆರೋಪಿ ಹಲ್ಲೆ ಮಾಡಿದ್ದರಿಂದ ನನ್ನ ಗಂಡ ಮೃತ ಪಟ್ಟಿದ್ದಾನೆಂದು ಮತ್ತೊಂದು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ನನಗೆ ಓದಿ ಹೇಳಿದಂತೆ ಪೊಲೀಸರಿ ಮುಂದು ನಿ.ಪಿ. 03 ರಂತೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ಗೊತ್ತಿದ್ದರು, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.